ಇದನ್ನು 'ದೇಶದ ಎಲ್ಲ ಕಚೇರಿಗಳೂ ಅನುಸರಿಸಬಹುದಾದ ಮಾದರಿಯೆಂದು ಕಳಿಸಲು ಶಿಫಾರಸು ಮಾಡುತ್ತೇವೆ. ನಿಮಗೆ ಮತ್ತೊಮ್ಮೆ ಅಭಿನಂದನೆ' ಎಂದು ಕೊನೆಗೊಂಡ ಪ್ಯಾರಾದೊಂದಿಗೆ ಆ ರಿಪೋರ್ಟ್ ಮುಗಿದಿರಲಿಲ್ಲ; ಅನಂತರ ಮುಂದುವರೆದಿದ್ದ ಒಂದು ಸಣ್ಣ ಪ್ಯಾರಾದಲ್ಲಿ ಕೆಲವು ಸಾಲುಗಳು ಹೀಗಿದ್ದವು: '...ಆದಾಗ್ಯೂ, ನೀವು ಕಲ್ಕತ್ತಾ ಝೂದಲ್ಲಿನ ಹುಲಿಗಾಗಿ ಮಾಡಿದ ಎರಡೂವರೆ ಆಣೆಯ ಖರ್ಚು, ನಿಯಮಗಳ ಪ್ರಕಾರ ಕ್ರಮಬದ್ಧವಾಗಿಲ್ಲ. ಸರಕಾರಿ ನಿಯಮಗಳ ರೀತಿಯಲ್ಲಿ ಅದು ತಪ್ಪು. ಇದು ಉದ್ದೇಶಪೂರ್ವಕವಾಗಿ ಮಾಡಿದ ತಪ್ಪಲ್ಲವೆಂದೂ, ಆಕಸ್ಮಿಕವಾಗಿ ನಡೆದಿರಬಹುದಾದ ಘಟನೆಯೆಂದೂ ಭಾವಿಸಿ, ಅದನ್ನು ನಮ್ಮ ಆಡಿಟ್ ರಿಪೋರ್ಟಿನಲ್ಲಿ ದಾಖಲಿಸಿಲ್ಲ. ನೀವು ಆ ಹುಲಿಗಾಗಿ ಮಾಡಿದ ಖರ್ಚಿನ ಎರಡೂವರೆ ಆಣೆಯ ಹಣವನ್ನು ಮರಳಿ ಸರಕಾರಕ್ಕೆ ಹಿಂದಿರುಗಿಸಿ, ಈ ಖರ್ಚು ಮಾಡಿದ ಅಧಿಕಾರಿಗೆ, ಮತ್ತೊಮ್ಮೆ ಹಾಗೆ ಮಾಡದಂತೆ ಎಚ್ಚರಿಕೆ ನೀಡಿ, ಒಂದು ಮೆಮೋ ಕೊಟ್ಟರೆ ಆಯ್ತು, ಅಲ್ಲಿಗೆ ಅದು ಮುಗಿದುಬಿಡುತ್ತದೆ. ಮುಂದಿನ ಹದಿನೈದು ದಿನಗಳಲ್ಲಿ ಆ ಹಣವನ್ನು ಕಟ್ಟಿ, ಅದರ ಬಗ್ಗೆ ಕ್ರಮ ಕೈಕೊಂಡದ್ದರ ರಿಪೋರ್ಟನ್ನು ನಮ್ಮ ಕಚೇರಿಗೆ ಕಳಿಸಿ, ಪತ್ರದ ಒಂದು ಪ್ರತಿಯನ್ನು ನಿಮ್ಮ ಮೇಲಿನ ಕಚೇರಿಗೆ ಕಳಿಸಲು ಈ ಮೂಲಕ ಸೂಚಿಸಲಾಗಿದೆ.'

ರಿಪೋರ್ಟನ್ನು ಓದುತ್ತಿದ್ದ ಪಪಿಹಾಳಿಗೆ ಅದು ಏನೆಂಬುದರ ತಲೆಬುಡ ಒಂದೂ ಗೊತ್ತಾಗಲಿಲ್ಲ. ಆದರೂ ಅದು ತನ್ನ ಪ್ರಾಮಾಣಿಕ ಬಾಸ್ ಮೇಲೆ ಯಾವುದೋ ಅನಗತ್ಯ ಆರೋಪ ಹೊರಿಸುತ್ತಿದೆಯೆಂಬ ಸಣ್ಣ ನೋವು ಅವಳಲ್ಲಿ ಕಾಣಿಸದೆ ಇರಲಿಲ್ಲ. ಡಾ. ಚಟರ್ಜಿಯವರ ಬ್ರೇನ್ ಎಷ್ಟು ಶಾರ್ಪ್ ಇತ್ತೆಂದರೆ, ಒಂದೇ ಕ್ಷಣದಲ್ಲಿ ರಿಪೋರ್ಟಿನ ಆ ಸಾಲುಗಳ ಹಿಂದಿನ ಪೂರ್ಣ ಕಥೆ ಅವರ ಮನಸ್ಸಿನಲ್ಲಿ ಒಂದು ಸುತ್ತು ಹೊಡೆದು ಹೋಗಿಬಿಟ್ಟಿತು. 'ಓಹೋ ಅದಾ ಕಥೆ!!' ಎಂದು ತಮ್ಮ ಮನಸ್ಸಿನಲ್ಲೇ ಅಂದುಕೊಂಡ ಅವರು, 'ಆಂ, ಪಪಿಹಾ ಆ ರಿಪೋರ್ಟನ್ನು ಇಲ್ಲಿ ಕೊಡು, ನಿನ್ನೆ ಡೈರೆಕ್ಟರೇಟ್‌ಗೆ ಕಳಿಸಬೇಕಾದ ಒಂದು ಪತ್ರದ ಡಿಕ್ಟೇಶನ್ ಕೊಟ್ಟಿದ್ದೆ ಅಲ್ವಾ, ಅದನ್ನ ಬೇಗ ರೆಡಿ ಮಾಡ್ಕೊಂಡು ಬಾ. ಈ ರಿಪೋರ್ಟ್ ಬಗ್ಗೆ ಆಮೇಲೆ ಯೋಚಿಸೋಣ' ಎಂದವರೆ, ಅದನ್ನು ತೆಗೆದುಕೊಂಡು ಅವಳನ್ನು ಅಲ್ಲಿಂದ ಕಳಿಸಿದರು.

★★★

ಮನುಷ್ಯ ಎಷ್ಟೇ ಪ್ರಾಮಾಣಿಕನಾಗಿದ್ದರೂ ಒಮ್ಮೊಮ್ಮೆ ತಪ್ಪುವುದು ಸಹಜ. ಈ ಸತ್ಯವನ್ನು ಡಾ. ಚಟರ್ಜಿ ಬಲವಾಗಿ ನಂಬಿದ್ದವರು. ಆದರೆ, ಅಂಥದ್ದು ಪ್ರಜ್ಞಾಪೂರ್ವಕವಾಗಿ ನಡೆಯದಂತೆ ತಮ್ಮ ಸರ್ವಿಸಿನುದ್ದಕ್ಕೂ ಎಚ್ಚರಿಕೆ ವಹಿಸಿದವರು ಅವರು. ಆ ಪ್ರಾಮಾಣಿಕತೆಯ ಪಾಠವನ್ನೇ ಅವರು ತಮ್ಮ ಸಿಬ್ಬಂದಿಗೆ ಮತ್ತೆ ಮತ್ತೆ ಹೇಳುವಾಗ ಅವರಲ್ಲಿ ತಾನು ಮೊದಲು ತಪ್ಪು ಮಾಡಬಾರದೆಂಬ ಸ್ವಪ್ರಜ್ಞೆಯ ಜೊತೆಗೆ, ಯಾರಿಂದಲೂ ತಪ್ಪುಗಳಾಗಬಾರದೆಂಬ ಎಚ್ಚರಿಕೆಯೂ ಇರುತ್ತಿತ್ತು. ಇಷ್ಟೆಲ್ಲ ಎಚ್ಚರಿಕೆ ವಹಿಸುತ್ತಿದ್ದ ಅವರಿಗೆ ಆಡಿಟ್ ರಿಪೋರ್ಟಿನ ಕೊನೆಯ ಪ್ಯಾರಾದಲ್ಲಿದ್ದ ಮಾತುಗಳು ಒಂದಿಷ್ಟು ಹೃದಯಕ್ಕೆ ಚುಚ್ಚಿದಂತೆ ಭಾಸವಾಗತೊಡಗಿದವು. ಅಚ್ಚರಿಯೆಂದರೆ, ಅದನ್ನು ಹುಲಿಗಾಗಿ ಖರ್ಚು ಮಾಡಿದವರು ಬೇರೆ ಯಾವ ಅಧಿಕಾರಿಯೂ ಆಗಿರದೆ, ಡಾ. ಸತ್ಯಾರ್ಥಿ ಚಟರ್ಜಿ ಅವರೇ ಆಗಿದ್ದರು. ಆದಾಗ್ಯೂ ಅದನ್ನು ನೋವೆಂದು ಭಾವಿಸದೆ, ತಮ್ಮ ಎಂದಿನ ಸ್ಥಿತಪ್ರಜ್ಞತೆಯ ಮನೋಭಾವದಿಂದಲೇ ಆ ಕಾಮೆಂಟಿನ ಹಿಂದೆ ನಡೆದು ಹೋದ ಘಟನೆಯ ಬಗ್ಗೆ ಹಿನ್ನಾಲೋಚನೆಗೆ ಬಿದ್ದರು. ಆಡಿಟ್‌ನವರು ಎತ್ತಿದ ಆಕ್ಷೇಪಣೆಗೆ ವಸ್ತುಸ್ಥಿತಿಯ ಉತ್ತರ ಕೊಟ್ಟು ಮುಗಿಸುವ ವರೆಗೂ ಅವರಿಗೆ ಸಮಾಧಾನವೇ ಇರದು.

ತಾವು ಕುಳಿತಿದ್ದ ಸೀಟಿನ ಎದುರಿನ ಗೋಡೆಗೆ ಹಾಕಿದ್ದ ಗಾಂಧೀಜಿಯ ನಗುಮೊಗದ